# Para Medical Board, Bengaluru

**Address:** #5, New No: 40/20A, Lakshmi Complex, First Floor, Opp. Vani Vilas Hospital, Fort, Bengaluru-560002
**Contact No**: 080-26702159, 26705773, 26703922 Fax: 26705410
E-Mail: paramedicalbaord97@gmail.com Website:www.pmbkarnataka.org

PMB/25/2015-16 Date:

## ಅಧಿಕೃತ ಪ್ರಕಟಣೆ

ವಿಷಯ: 2016-17ರ ಸಾಲಿನ ಸಂಯೋಜನಾ ನವೀಕರಣ ಶುಲ್ಕ ಪಾವತಿ ಮಾಡುವ ಬಗ್ಗೆ.

ಉಲ್ಲೇಖ: ಈ ಕಛೇರಿ ಇದೇ ಸಮ ಸಂಖ್ಯೆ:ಪತ್ರ ದಿ:10.05.2016

*********

ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಪ್ಯಾರಾ ಮೆಡಿಕಲ್ ಬೋರ್ಡ್‌ನೊಂದಿಗೆ ಸಂಯೋಜನೆಗೊಂಡು ಪ್ಯಾರಾ ಮೆಡಿಕಲ್ ಕೋರ್ಸ್‌ಗಳನ್ನು ನಡೆಸುತ್ತಿರುವ ವಿದ್ಯಾ ಸಂಸ್ಥೆಗಳು ಪ್ರತಿ ವರ್ಷದಂತೆ 2016-17ರ ಸಾಲಿನ ಸಂಯೋಜನಾ ನವೀಕರಣ ಶುಲ್ಕ ಪ್ರತಿ ಕೋರ್ಸಿಗೆ ರೂ.10000/- ರಂತೆ ಮಂಡಳಿಗೆ ದಿ:30.06.2016ರ ಒಳಗಾಗಿ ಪಾವತಿ ಮಾಡಿ 2016-17ರ ಸಂಯೋಜನಾ ನವೀಕರಣ ಪ್ರಮಾಣ ಪತ್ರವನ್ನು ಮಂಡಳಿಯಿಂದ ಪಡೆಯಬೇಕೆಂದು ಉಲ್ಲೇಖಿತ ಪತ್ರದಲ್ಲಿ ಎಲ್ಲಾ ಪ್ಯಾರಾ ಮೆಡಿಕಲ್ ವಿದ್ಯಾ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿತ್ತು. ಆದರೆ ಹಲವಾರು ವಿದ್ಯಾ ಸಂಸ್ಥೆಗಳು ಇಲ್ಲಿಯವರೆಗೂ ಸಲ್ಲಿಸಿರುವುದಿಲ್ಲ ಆದುದರಿಂದ ದಿ:30.06.2016ರ ಒಳಗಾಗಿ ಸಂಯೋಜನಾ ನವೀಕರಣ ಶುಲ್ಕವನ್ನು ಮಂಡಳಿಗೆ ಸಲ್ಲಿಸುವಂತೆ ಪುನ: ತಿಳಿಸಲಾಗಿದೆ ತಪ್ಪಿದಲ್ಲಿ 2016-17ರ ಸಾಲಿಗೆ ಸಂಯೋಜನಾ ನವೀಕರಣ ಪ್ರಮಾಣ ಪತ್ರ ಪಡೆಯದೇ ತಮ್ಮ ಸಂಸ್ಥೆಯಿಂದ ಪ್ರವೇಶಾತಿ ಮಾಡಿಕೊಳ್ಳುವ ವಿದ್ಯಾರ್ಥಿಗಳ ಪಟ್ಟಿಯನ್ನು ಯಾವುದೇ ಕಾರಣಕ್ಕೂ ಮಂಡಳಿಯಲ್ಲಿ ಒಪ್ಪಿಕೊಳ್ಳಲಾಗುವುದಿಲ್ಲ ಹಾಗೂ ಮಂಡಳಿಯ ಪಟ್ಟಿಯಿಂದ ತಮ್ಮ ಸಂಸ್ಥೆಯ ಹೆಸರನ್ನು ಕೈಬಿಡಲಾಗುವುದು. ಇದರಿಂದ ವಿದ್ಯಾರ್ಥಿಗಳಿಗೆ ಉಂಟಾಗುವ ತೊಂದರೆಗೆ ತಮ್ಮ ಸಂಸ್ಥೆಯೇ ನೇರ ಜವಾಬ್ದಾರಿಯಾಗುತ್ತದೆ ಎಂದು ತಿಳಿಸಲಾಗಿದೆ.

ಸದಸ್ಯ ಕಾರ್ಯದರ್ಶಿಗಳು
29/6/16